558 (909) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶಗಳನ್ನೊಳಗೊಂಡ ಸುರತ್ಕಲ್ ಕ್ಷೇತ್ರಗಳಲ್ಲಿ ಗರಿಷ್ಟ ಸಂಖ್ಯೆಯಲ್ಲಿ ಪಶುಸಂಗೋಪನಾ ಕಾರ್ಯವನ್ನು ನಿರ್ವಹಿಸುತ್ತಿದ್ದು ಸೂಕ್ತ ಪ್ರಮಾಣದಲ್ಲಿ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸುವಲ್ಲಿ ಸರ್ಕಾರದ ಕ್ರಮಗಳೇನು;

ಆ) ಸುರತ್ಕಲ್‌ನಲ್ಲಿರುವ ಪಶುಚಿಕಿತ್ಸಾಲಯವು ಬೇಡಿಕೆಗನುಗುಣವಾದ ಕಾರ್ಯಕ್ಷಮತೆಯನ್ನು ಹೊಂದಿಲ್ಲವಾದ ಕಾರಣ ಸುರತ್ಕಲ್ ಹೋಬಳಿ ಪ್ರದೇಶಕ್ಕೆ ಈಗ ಇರುವ ಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸಿ ಪಶು ವೈದ್ಯಕೀಯ ಆಸ್ಪತ್ರೆಯನ್ನಾಗಿ ವ್ಯವಸ್ಥೆಗೊಳಿಸಲು ಸರ್ಕಾರ ಮುಂದಾಗುವುದೇ?

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ. ಸುರತ್ಕಲ್ ಕ್ಷೇತ್ರದಲ್ಲಿ 12067 ಜಾನುವಾರು ಘಟಕಗಳಿದ್ದು, 3 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿರುತ್ತದೆ. ಆದರೆ ಈಗಾಗಲೇ 7 ಪಶುವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದೆ. ಆದ್ದರಿಂದ, ಹೊಸ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದಿಲ್ಲ.

ಆ) ಪ್ರಸ್ತುತ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ವೈದ್ಯರಿರುವ ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸುವ ಕಾರ್ಯಕ್ರಮವಿದ್ದು ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಪರಿವರ್ತಿಸುವ ಬಗ್ಗೆ ಕಾಲಕಾಲಕ್ಕೆ ಅವಶ್ಯಕತೆಗನುಗುಣವಾಗಿ ಪರಿಗಣಿಸಲಾಗುವುದು.

ಕಾಲಕಾಲಕ್ಕೆ ಅವಶ್ಯಕತೆಗನುಗುಣವಾಗಿ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

559 (536) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಪಶು ಚಿಕಿತ್ಸಾಕೇಂದ್ರದಿಂದ ಪಶು ಚಿಕಿತ್ಸಾಲಯಗಳಾಗಿ ಮೇಲ್ದರ್ಜೆಗೇರಿಸಿದ ಪಶು ಚಿಕಿತ್ಸಾಲಯಗಳೆಷ್ಟು; ಅವುಗಳಲ್ಲಿ ಪಶು ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; ಕಳೆದ 3 ವರ್ಷದ ರಾಜ್ಯವಾರು ಮಾಹಿತಿ ಒದಗಿಸುವುದು;

ಆ) ಪಶು ವೈದ್ಯರ ಹುದ್ದೆ ಭರ್ತಿಯಾಗದಿದ್ದಲ್ಲಿ ನಿಯೋಜನೆಯ ಮೇಲೆ ಪಶು ಚಿಕಿತ್ಸಾಲಯದ ಕಾರ್ಯನಿರ್ವಹಿಸಲಾಗುತ್ತಿದೆಯೇ; ವಿವರ ನೀಡುವುದು?

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) 2005–06ನೇ ಸಾಲಿನಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

2003–04 ಹಾಗೂ 2004–05ನೇ ಸಾಲಿನಲ್ಲಿ ಯಾವುದೇ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿಲ್ಲ. ಹೀಗೆ ಮೇಲ್ದರ್ಜೆಗೇರಿಸಿದ 147 ಪಶು ಚಿಕಿತ್ಸಾಲಯಗಳಲ್ಲಿ 41 ಪಶುವೈದ್ಯರ ಹುದ್ದೆಗಳನ್ನು ಜನವರಿ 2006ನೇ ತಿಂಗಳಿನಿಂದ ಭರ್ತಿ ಮಾಡಲಾಗಿದೆ.

ಆ) ಜಿಲ್ಲೆಯ ಉಪನಿರ್ದೇಶಕರು ಪಶು ವೈದ್ಯರ ಹುದ್ದೆಗೆ ಭರ್ತಿಯಾಗದೇ ಇರುವ ಕಡೆ ಹತ್ತಿರದ ಪಶುವೈದ್ಯರನ್ನು ಅಧಿಕ ಪ್ರಭಾರಕರನ್ನಾಗಿ ಸ್ಥಳೀಯ ಪರಿಸ್ಥಿತಿಗಳನ್ನಾಧರಿಸಿ ಕ್ರಮ ಕೈಗೊಂಡಿರುತ್ತಾರೆ ಹಾಗೂ ಪಶು ವೈದ್ಯರ ಹುದ್ದೆ ಭರ್ತಿಯಾಗದ ತಿಪಟೂರು ತಾಲ್ಲೂಕು ತಂಡಗಳ ಹಾಗೂ ಹಾಸನ ಜಿಲ್ಲೆಯ ಕಣಕಟ್ಟೆ ಪಶುಚಿಕಿತ್ಸಾಲಯಗಳಲ್ಲಿ ಮಾತ್ರ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಶ್ನೆ ಸಂಖ್ಯೆ 536ರ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಪಶು ಚಿಕಿತ್ಸಾಲಯಗಳಾಗಿ ಮೇಲ್ದರ್ಜೆಗೇರಿಸಿದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಪಟ್ಟಿ

ಅ) 2003–04 –ಉನ್ನತೀಕರಿಸಲಾಗಿಲ್ಲ.

ಆ) 2004–05 –ಉನ್ನತೀಕರಿಸಲಾಗಿಲ್ಲ.

ಇ) 2005–06 –ಉನ್ನತೀಕರಿಸಲಾದ ಸಂಸ್ಥೆಗಳ ವಿವರ ಕೆಳಕಂಡಂತಿದೆ.

2005–06ರಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದಿಂದ ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಿರುವ ಸಂಸ್ಥೆಗಳ ವಿವರ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ಸಂಸ್ಥೆ ಹೆಸರು
1	2	3	4
	ಬೆಂಗಳೂರು ನಗರ		
		ಬೆಂಗಳೂರು ಉತ್ತರ	ಮಾಕಳಿ
2.	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	
		ಮಾಗಡಿ	ಅಜ್ಜನಹಳ್ಳಿ
		ಕನಕಪುರ	ಉದಾರಹಳ್ಳಿ
			ಹುಣಸನಹಳ್ಳಿ
			ಚೀಲೂರು
			ತಟ್ಟೆಕೆರೆ
			ಕೊಳ್ಳಿಗಾನಹಳ್ಳಿ

1	2	3	4
		ಹೊಸಕೋಟೆ	ಶಿವನಾಮರ
		ರಾಮನಗರ	ಜಾಲಮಂಗಲ
			ಸುಗ್ಗನಹಳ್ಳಿ
3.	ದಾವಣಗೆರೆ	ದಾವಣಗೆರೆ	
		ಚನ್ನಗಿರಿ	ದೇವರಹಳ್ಳಿ
		ಹರಿಹರ	ಬೆಳ್ಳೂಡಿ
4.	ಶಿವಮೊಗ್ಗ	ಹೊಸನಗರ	
		ಭದ್ರಾವತಿ	ದಡಮಘಟ್ಟ
		ಸೊರಬ	ಎಣ್ಣೇಕೊಪ್ಪ
		ಶಿಕಾರಿಪುರ	ತೊಗರ್ಸಿ
			ಸಾಲೂರು
5.	ಚಿತ್ರದುರ್ಗ	ಹಿರಿಯೂರು	ಯಲ್ಲದಕೆರೆ
			ಜವಗೊಂಡನಹಳ್ಳಿ
		ಚಿತ್ರದುರ್ಗ	ಪಂಡರಹಳ್ಳಿ
		ಹೊಳಲ್ಕೆರೆ	ಚಿಕ್ಕಜಾಜೂರು
6.	ಕೋಲಾರ	ಶಿಡ್ಲಘಟ್ಟ	ಸಾದಲಿ
		ಮುಳಬಾಗಿಲು	ತಾಯಲೂರು
			ಮಲ್ಲನಾಯ್ಕನಹಳ್ಳಿ
		ಕೋಲಾರ	ನಾಗವಾರ
		ಶ್ರೀನಿವಾಸಪುರ	ಪಾತಪಲ್ಲಿ
7.	ತುಮಕೂರು	ಸಿರಾ	ಕೊಟ್ಟಿ
		ಮಧುಗಿರಿ	ಶ್ರಾವಂಡನಹಳ್ಳಿ
			ಕಾರ್ಪೇನಹಳ್ಳಿ
		ತುರುವೇಕೆರೆ	ಅಂಚೇಹಳ್ಳಿ
		ಕೊರಟಗೆರೆ	ವಡ್ಡಗೆರೆ

1	2	3	4
	ಮೈಸೂರು ವಿಭಾಗ		
8.	ಮೈಸೂರು	ನಂಜನಗೂಡು	ಕಳಲೆ
		ಮೈಸೂರು	ಇಟ್ಟಿಗೆಗೂಡು
		ಪಿರಿಯಾಪಟ್ಟಣ	ಭುವನಹಳ್ಳಿ
9.	ಚಾಮರಾಜನಗರ	ಕೊಳ್ಳೆಗಾಲ	ಕಾಮಗೆರೆ
		ಗುಂಡ್ಲುಪೇಟೆ	ಹಾಲಹಳ್ಳಿ
			ಬೊಮ್ಮಲಾಪುರ
		ಚಾಮರಾಜನಗರ	ಕಾಗಲವಾಡಿ
			ದೇಮಹಳ್ಳಿ
10.	ಚಿಕ್ಕಮಗಳೂರು	ತರೀಕೆರೆ	ರಂಗೇನಹಳ್ಳಿ
		ಕಡೂರು	ಹುಲಿಕೆರೆ
			ಬಸೂರು
			ಕೆ. ಬಿದರೆ
		ಚಿಕ್ಕಮಗಳೂರು	ಬೆಳವಾಡಿ
11.	ಮಂಡ್ಯ	ಮದ್ದೂರು	ದೊಡ್ಡ ಅರಸಿಕೆರೆ
			ಕೊಳಗೆರೆ
			ಟಿ.ಎಂ. ಹೊಸೂರು
		ನಾಗಮಂಗಲ	ಬೋಗಾದಿ
			ಭೀಮನಹಳ್ಳಿ
		ಶ್ರೀರಂಗಪಟ್ಟಣ	ನಗುವಿನಹಳ್ಳಿ
			ಟಿ.ಎಂ. ಹೊಸೂರು
		ಮಂಡ್ಯ	ಹೊಸಹಳ್ಳಿ
12.	ಉಡುಪಿ	ಉಡುಪಿ	ಪಡುಬಿದ್ರಿ
13.	ದಕ್ಷಿಣ ಕನ್ನಡ ಜಿಲ್ಲೆ	ಬಂಟ್ವಾಳ	
		ಸುಳ್ಯ	ಅರಂತೋಡು
14.	ಹಾಸನ		
		ಅರಸೀಕೆರೆ	ಜೆ.ಸಿ.ಪುರ
		ಹಾಸನ	ಉಗಿನೆ

1	2	3	4
			ಕುದುರಗುಂಡಿ
		ಅರಕಲಗೂಡು	ಸಂತೆಮರೂರು
		ಸಕಲೇಶಪುರ	ಹಾನುಬಾಳು
		ಆಲೂರು	ಕೆ. ಹೊಸಕೋಟೆ
15.	ಗುಲ್ಬರ್ಗಾ	ಗುಲ್ಬರ್ಗಾ	
		ಆಳಂದ	
		ಅಫ್‌ಜಲಪುರ	ಕಲ್ಲೂರು
			ಚೌಡಾಪುರ
		ಚಿತ್ತಾಪುರ	ಮಂಗಳಗಿ
			ರೇವಗ್ಗಿ
			ರಾವೂರ
		ಯಾದಗಿರಿ	ಚಿನ್ನಕಾರ
			ಚಮೇಟ್ಲಾ
			ಅಜಲ್‌ಪುರ
		ಜೇವರ್ಗಿ	ವಡಗೇರಾ
			ಬಿರಾಳ್
			ಕಲ್ಲೂರ ಕೆ
			ಅರಳಗುಂಡಿಗೆ
16.	ಬೀದರ್	ಬೀದರ್	ಯಕತಪೂರ
			ಗಾದಗಿ
			ಬರೂರ
		ಔರಾದ್	ಖೇರಡಾ
			ತೋರಣಾ
			ದೂಪತ್ ಮಹಗಾಂವ್
		ಭಾಲ್ಕಿ	ಜಾಂತಿ
			ಲಖಿತ್‌ಗಾಂವ್
		ಬಸವಕಲ್ಯಾಣ	ಬೇಲೂರ (ಕಿಟ್ಟಾ)
			ಗಡಿಗೌಂಡಗಾಂವ್

1	2	3	4
		ಹುಮ್ನಾಬಾದ್	ಮುಸ್ತರಿ
			ಕರಕನಳ್ಳಿ
			ಚಾಂಗಲೇರ
			ಸೇಡೋಳ
			ಕನಕಟ್ಟಾ
17.	ರಾಯಚೂರು		
		ಲಿಂಗಸೂಗೂರು	ಮಟ್ಟೂರು
			ಯರಡೋಣಿ
		ದೇವದುರ್ಗ	ಗಾಣದಾಳ
			ಕ್ಯಾದಿಗೇರಾ
18.	ಬಳ್ಳಾರಿ		
		ಹಗರಿಬೊಮ್ಮನಹಳ್ಳಿ	ಹಂಪಾಪಟ್ಟಣ
			ರಾಮನಗರ
			ಬೆಣ್ಣೆಕಲ್
		ಹಡಗಲಿ	ಹ್ಯಾರಡ
			ಬೂದನೂರು
			ಕತ್ತೇಬೆನ್ನೂರು
			ಅಡವಿ ಮಲ್ಲನಕೇರಿ
		ಕೂಡ್ಲಿಗಿ	ನರಸಿಂಹಗಿರಿ
			ಆಲೂರು
19.	ಕೊಪ್ಪಳ	ಕೊಪ್ಪಳ	
		ಯಲಬುರ್ಗ	ಶಿರೂರ
			ಬುಳೊಟಗಿ
			ತೊಂಡಿಹಾಳ
	ಬೆಳಗಾಂ ವಿಭಾಗ		
20.	ಬೆಳಗಾಂ		
		ರಾಯಭಾಗ್	ಪರಮಾನಂದವಾಡಿ

1	2	3	4
		ಹುಕ್ಕೇರಿ	ಬಡಕುಂದ್ರಿ
			ಕುರಣ
			ಕೆಸ್ತಿ
		ಅಥಣಿ	ಅನಂತಪುರ
		ಬೈಲಹೊಂಗಲ	ಮೂಗಬಸವ
		ಸೌಂದತ್ತಿ	ಕಗದಾಳ
		ಗೋಕಾಕ್	ಬಳೋಬಾಳ
			ಬೆಟಗೇರಿ
		ರಾಮದುರ್ಗ	ಮುದೇನೂರ
21.	ಉತ್ತರ ಕನ್ನಡ ಜಿಲ್ಲೆ		
		ಕುಮಟಾ	ಮಿರ್ಜಾನ
		ಮುಂಡಗೋಡ	ಕಲಕೇರಿ
		ಹೊನ್ನಾವರ	ಮೂಡ್ಕಣಿ
		ಯಲ್ಲಾಪುರ	ಉಮ್ಮಚಗಿ
		ಹಳಿಯಾಳ	ಕೆಳಗಿನಕೊಪ್ಪ
		ಸಿದ್ದಾಪುರ	ಹೆಗ್ಗರಣಿ
22.	ಬಿಜಾಪುರ	ಬಿಜಾಪುರ	ಬಿಜ್ಜರಗಿ
		ಬಸವನಬಾಗೇವಾಡಿ	ಮುಳವಾಡ
		ಇಂಡಿ	ಬಳ್ಳೊಳ್ಳಿ
			ಜಿಗಜೀವಣಗಿ
			ಬರಡೋಲ
		ಮುದ್ದೇಬಿಹಾಳ	ತುಂಬಗಿ
			ರಕ್ಕಸಗಿ
23.	ಗದಗ ಜಿಲ್ಲೆ	ಗದಗ	ಕಣಗಿನಹಾಳ
			ತಿಮ್ಮಾಪುರ
		ನರಗುಂದ	ಜಗಾಪುರ
		ರೋಣ	ಹಿರೇಹಾಳ

1	2	3	4
		ಮುಂಡರಗಿ	ಜಂಪ್ಲಿಶಿರೂರು
		ಶಿರಹಟ್ಟಿ	ಬನ್ನಿಕೊಪ್ಪ
24.	ಧಾರವಾಡ ಜಿಲ್ಲೆ	ಹುಬ್ಬಳ್ಳಿ	ಉಣಕಲ್
			ತಾರೀಹಾಳ
		ಧಾರವಾಡ	ನವಲೂರು
		ಕಲಘಟಗಿ	ಸುರಶೆಟ್ಟಿಕೊಪ್ಪ
		ಕುಂದಗೋಳ	ಪಶುಪತಿಹಾಳ
		ನವಲಗುಂದ	ಶಿಶುವಿನಹಳ್ಳಿ
25.	ಬಾಗಲಕೋಟೆ	ಬಾಗಲಕೋಟೆ	ಹಿರೇಮ್ಯಾಗೇರಿ
		ಮುಧ್ದೋಳ	ಇಂಗಳಗಿಯಡಹಳ್ಳಿ
		ಬೀಳಗಿ	ಅರಕೇರಿ
		ಬಾದಾಮಿ	ಕೆಲವಡಿ
		ಹುನಗುಂದ	ಕಂದಗಲ್ಲ
		ಜಮಖಂಡಿ	ಮುತ್ತೂರ
26.	ಹಾವೇರಿ		
		ಹಿರೇಕೆರೂರು	ತಡಕನಹಳ್ಳಿ
		ಹಾನಗಲ್	ಕೊಪ್ಪರಶಿಕೊಪ್ಪ
			ಹಸನಾಬಾದಿ
		ರಾಣೇಬೆನ್ನೂರು	ಕುಪ್ಪೇಲೂರು
		ಸವಣೂರು	ಹತ್ತಿಮತ್ತೂರು

560 (537) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೊರಬ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಸಾಮಾನ್ಯ ವೈದ್ಯರುಗಳ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸೊರಬ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ 2 ತಜ್ಞ ವೈದ್ಯರುಗಳ ಹುದ್ದೆ ಖಾಲಿ ಇರುತ್ತದೆ.